# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:** 768

**ಮಾನ್ಯ ಸದಸ್ಯರ ಹೆಸರು** : ಶ್ರೀ ಎಂ.ಎಲ್. ಅನಿಲ್ ಕುಮಾರ್
(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

**ಉತ್ತರಿಸಬೇಕಾದ ದಿನಾಂಕ** : 26-12-2022

**ಉತ್ತರಿಸುವ ಸಚಿವರು** : ಪ್ರವಾಸೋದ್ಯಮ, ಪರಿಸರ
ಹಾಗೂ ಜೀವಿಶಾಸ್ತ್ರ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ರಾಜ್ಯದ ಪ್ರವಾಸಿ ಮಿತ್ರರು ನಿರಂತರವಾಗಿ ಕರ್ತವ್ಯ ನಿರ್ವಹಿಸುತ್ತಿರುವುದರ ಬಗ್ಗೆ ಸರ್ಕಾರದ ನಿಲುವೇನು: (ಸಂಪೂರ್ಣವಾದ ಮಾಹಿತಿ ನೀಡುವುದು | ಗೃಹರಕ್ಷಕ ಇಲಾಖೆಯಿಂದ ಗೃಹರಕ್ಷಕರನ್ನು ಪ್ರವಾಸಿ ಮಿತ್ರರಾಗಿ ಪ್ರವಾಸೋದ್ಯಮ ಇಲಾಖೆಗೆ ರಾಜ್ಯದ ಎಲ್ಲಾ ಜಿಲ್ಲೆಗಳ ಪ್ರಮುಖ ಪ್ರವಾಸಿ ಕೇಂದ್ರಗಳಲ್ಲಿ 3 ತಿಂಗಳಿಗೊಮ್ಮೆ ಸರದಿ ಆಧಾರದ ಮೇಲೆ ಬದಲಾಯಿಸುವ ಷರತ್ತಿಗೊಳಪಟ್ಟು ಪಾವತಿ ಆಧಾರದ ಮೇರೆಗೆ ಕರ್ತವ್ಯ ನಿರ್ವಹಿಸಲು ಇಲಾಖೆಗಳ ಕೋರಿಕೆ ಮೇರೆಗೆ ನಿಯೋಜಿಸಲಾಗಿರುತ್ತದೆ. |
| ಆ) | ಕರ್ನಾಟಕ ರಾಜ್ಯದ ಪ್ರವಾಸಿ ಮಿತ್ರರು ಎದುರಿಸುತ್ತಿರುವ ಸಮಸ್ಯೆಗಳು ಯಾವುವು: ಸರ್ಕಾರವು ಈವರೆಗೂ ನಿವಾರಿಸಿರುವ ಸಮಸ್ಯೆಗಳಾವುವು: (ಸಂಪೂರ್ಣವಾದ ಮಾಹಿತಿ ನೀಡುವುದು) | ಆರಕ್ಷಕ ಮಹಾನಿರ್ದೇಶಕರು, ಗೃಹರಕ್ಷಕ ದಳದ ಮಹಾ ಸಮಾದೇಷ್ಟರು ಮತ್ತು ನಿರ್ದೇಶಕರು ಪೌರ ರಕ್ಷಣೆರವರ ಮೂಲ ಇಲಾಖೆಯಿಂದ ನಿಯೋಜಿಸಿರುವ ಪ್ರವಾಸಿ ಮಿತ್ರರನ್ನು ಪ್ರವಾಸಿ ತಾಣಗಳಿಗೆ ಭೇಟಿ ನೀಡುವ ಪ್ರವಾಸಿಗರಿಗೆ ಭದ್ರತೆ ಒದಗಿಸುವ ಸಲುವಾಗಿ ನಿಯೋಜಿಸಲಾಗಿರುತ್ತದೆ. ವೇತನ ಪರಿಷ್ಕರಣೆ ಹಾಗೂ ಉದ್ಯೋಗ ಭದ್ರತೆಯ ಸಮಸ್ಯೆಗಳನ್ನು ಎದುರಿಸುತ್ತಿದ್ದು, ಸದರಿ ವೇತನವನ್ನು ಪರಿಷ್ಕರಿಸಿ, ಪ್ರಸ್ತುತ ಪರಿಸ್ಥಿತಿಗೆ ಅನುಗುಣವಾಗಿ ಸೂಕ್ತ ವೇತನವನ್ನು ನಿಗಧಿ ಪಡಿಸುವ ಬಗ್ಗೆ ಸೂಕ್ತ ಕ್ರಮವಹಿಸುವಂತೆ ಆರಕ್ಷಕ ಮಹಾನಿರ್ದೇಶಕರು, ಗೃಹರಕ್ಷಕ ದಳದ ಮಹಾಸಮಾದೇಷ್ಟರು ಮತ್ತು ನಿರ್ದೇಶಕರು ಪೌರ ರಕ್ಷಣೆರವರಿಗೆ ಪತ್ರ ಬರೆಯಲಾಗಿದೆ. |

| | | |
|---|---|---|
| ಇ) | ಗ್ರಾಮೀಣ ಪ್ರದೇಶದ ಯುವ ಸಮುದಾಯಕ್ಕೆ ಉದ್ಯೋಗ ಕಲ್ಪಿಸುವ ನಿಟ್ಟಿನಲ್ಲಿ ಪ್ರವಾಸಿ ಮಿತ್ರ ಯೋಜನೆಯಡಿ 2000 ಉದ್ಯೋಗ ನೀಡುವ ಯೋಜನೆ ಯಶಸ್ವಿಯಾಗಿದೆಯೇ; ಈ ಯೋಜನೆಯಡಿ ನೇಮಕಗೊಂಡು ತರಬೇತಿ ಪಡೆದ ಪ್ರವಾಸಿ ಮಿತ್ರ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಸೂಕ್ತ ವೇತನವನ್ನು ನಿಗಧಿಪಡಿಸಿದೆಯೇ; ಇಲ್ಲದಿದ್ದಲ್ಲಿ, ಸರ್ಕಾರವು ಯಾವ ಕಾಲ ಮಿತಿಯೊಳಗೆ ವೇತನ ನಿಗಧಿಪಡಿಸಲಾಗುವುದು: (ವಿಸ್ತೃತವಾದ ಮಾಹಿತಿ ನೀಡುವುದು) | ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ದಿಂದ ತರಬೇತಿ ಪಡೆದ ಒಟ್ಟು 930 ಸಿಬ್ಬಂದಿಗಳಲ್ಲಿ 500 ಗೃಹರಕ್ಷಕರ ಸೇವೆಯನ್ನು ಪ್ರವಾಸಿ ಮಿತ್ರರಾಗಿ ರಾಜ್ಯದ ಎಲ್ಲಾ ಜಿಲ್ಲೆಗಳ ಪ್ರಮುಖ ಪ್ರವಾಸಿ ಕೇಂದ್ರಗಳಲ್ಲಿ 3 ತಿಂಗಳಿಗೊಮ್ಮೆ ಸರದಿ ಆಧಾರದ ಮೇಲೆ ಬದಲಾಯಿಸುವ ಷರತ್ತಿಗೊಳಪಟ್ಟು ಕರ್ತವ್ಯಕ್ಕೆ ನಿಯೋಜಿಸಲಾಗಿರುತ್ತದೆ.<br><br>ಪ್ರವಾಸೋದ್ಯಮ ಇಲಾಖೆಯಲ್ಲಿ ಪ್ರವಾಸಿ ತಾಣಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪ್ರವಾಸಿ ಮಿತ್ರರಿಗೆ ಆರಕ್ಷಕ ಮಹಾನಿರ್ದೇಶಕರು, ಗೃಹರಕ್ಷಕ ದಳದ ಮಹಾಸಮಾದೇಷ್ಟರು ಮತ್ತು ನಿರ್ದೇಶಕರು ಪೌರರಕ್ಷಣೆರವರು ನಿಗಧಿಪಡಿಸಿರುವಂತೆ ಪ್ರತಿದಿನಕ್ಕೆ ಬೆಂಗಳೂರು ನಗರದಲ್ಲಿ ರೂ.455/- ಹಾಗೂ ಇತರೆ ಸ್ಥಳಗಳಲ್ಲಿ ರೂ.380/- ರಂತೆ ಕರ್ತವ್ಯ ಭತ್ಯೆಯನ್ನು ಹಾಗೂ ಮಾಹೆಯಾನ ರೂ.80/-ಗಳನ್ನು ಸ್ವಚ್ಛತಾ ಭತ್ಯೆಯಾಗಿ ಪ್ರವಾಸೋದ್ಯಮ ಇಲಾಖೆಯಿಂದಲೇ ಪಾವತಿಸಲಾಗುತ್ತಿದೆ. |
| ಈ) | ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದಿಂದ ಕರ್ನಾಟಕ ರಾಜ್ಯದ ಪ್ರವಾಸಿ ಮಿತ್ರರಿಗೆ ಯಾವ ಯಾವ ಅನುಕೂಲಗಳಾಗಿವೆ ಮತ್ತು ಸದರಿ ಇಲಾಖೆಯಿಂದ ಕರ್ನಾಟಕ ರಾಜ್ಯದ ಪ್ರವಾಸಿ ಮಿತ್ರರಿಗೆ ಮಾಸಿಕ ಪರಿಹಾರವೇನಾದರೂ ನೀಡುತ್ತಿದೆಯೇ; ಇಲ್ಲದಿದ್ದಲ್ಲಿ, ಪರಿಹಾರ ನೀಡಲು ಸರ್ಕಾರ ಯಾವಾಗ ಕ್ರಮ ಕೈಗೊಳ್ಳುವುದು? (ಮಾಹಿತಿ ನೀಡುವುದು) | ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದಿಂದ ತರಬೇತಿ ಪಡೆದ ಒಟ್ಟು 930 ಸಿಬ್ಬಂದಿಗಳಲ್ಲಿ 500 ಪ್ರವಾಸಿ ಮಿತ್ರರ ಸೇವೆಯನ್ನು ರಾಜ್ಯದ ಎಲ್ಲಾ ಜಿಲ್ಲೆಗಳ ಪ್ರಮುಖ ಪ್ರವಾಸಿ ಕೇಂದ್ರಗಳಲ್ಲಿ ಪ್ರತಿ 3 ತಿಂಗಳಿಗೊಮ್ಮೆ ಸರದಿ ಆಧಾರದ ಮೇಲೆ ಬದಲಾಯಿಸುವ ಷರತ್ತಿಗೊಳಪಟ್ಟು ಕರ್ತವ್ಯಕ್ಕೆ ನಿಯೋಜಿಸಲಾಗಿರುತ್ತದೆ. ಪ್ರವಾಸಿ ಮಿತ್ರರು ಕರ್ತವ್ಯ ನಿರ್ವಹಿಸಿದ ದಿನಗಳಿಗೆ ಮಾತ್ರ ಪ್ರತಿ ದಿನಕ್ಕೆ ಬೆಂಗಳೂರು ನಗರದಲ್ಲಿ ರೂ.455/- ಹಾಗೂ ಇತರೆ ಸ್ಥಳಗಳಲ್ಲಿ ರೂ.380/-ರಂತೆ ಕರ್ತವ್ಯ ಭತ್ಯೆಯನ್ನು ಹಾಗೂ ಮಾಹೆಯಾನ ರೂ.80/-ಗಳನ್ನು ಸ್ವಚ್ಛತಾ ಭತ್ಯೆಯಾಗಿ ಪ್ರವಾಸೋದ್ಯಮ ಇಲಾಖೆಯಿಂದಲೇ ಪಾವತಿಸಲಾಗುತ್ತಿದೆ. |

**TOR 351 TDV 2022**

(ಆನಂದ್ ಸಿಂಗ್)
ಪ್ರವಾಸೋದ್ಯಮ, ಪರಿಸರ
ಹಾಗೂ ಜೀವಿಶಾಸ್ತ್ರ, ಸಚಿವರು